# ರಾಜ್ಯ ಒಕ್ಕಲಿಗರ ಸಂಘ

## ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು.

ಸಂಖ್ಯೆ:ರಾಒಸಂ/ಎಸ್‌ಕೆಜೆಸಿ/ಸಿ&ಆರ್-17/2019-20

ಬೆಂಗಳೂರು,
ದಿನಾಂಕ: 20 ಮೇ, 2020.

### ಅಧಿಸೂಚನೆ

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ-27(ಎ) ರನ್ವಯ ರಾಜ್ಯ ಒಕ್ಕಲಿಗರ ಸಂಘಕ್ಕೆ ಸರ್ಕಾರದಿಂದ ನೇಮಕಗೊಂಡಿರುವ ಆಡಳಿತಾಧಿಕಾರಿಯವರು ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಬೆಂಗಳೂರು ಸಂಸ್ಥೆಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸಲು ಉದ್ದೇಶಿಸಿ, ಅಧಿಸೂಚನೆ ಸಂಖ್ಯೆ:ರಾಒಸ/ಎಸ್‌ಕೆಜೆಸಿ)/ಸಿ&ಆರ್-17/2019-20 ದಿನಾಂಕ:01.01.2020ರಲ್ಲಿ ಕರಡು ನಿಯಮಾವಳಿಗಳ ಪ್ರತಿಯನ್ನು ರಾಜ್ಯ ಒಕ್ಕಲಿಗರ ಸಂಘ ಹಾಗೂ ಸದರಿ ಸಂಸ್ಥೆಯ ನೋಟೀಸ್ ಬೋರ್ಡಿನಲ್ಲಿ ಮತ್ತು ಅಂತರ್ಜಾಲದಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಅಧಿಸೂಚನೆ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು,

ಸದರಿ ಕರಡು ನಿಯಮಾವಳಿಗಳ ಪ್ರತಿಯನ್ನು ದಿನಾಂಕ:01.01.2020ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿತ್ತು;

ಮತ್ತು ಸದರಿ ಕರಡು ನಿಯಮಾವಳಿಗಳ ಬಗ್ಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳು/ ಸಲಹೆಗಳನ್ನು ಆಡಳಿತಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ, ಇವರು ಪರಿಗಣಿಸಿರುತ್ತಾರೆ.

ಆದುದರಿಂದ, ಈಗ ಆಡಳಿತಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ, ಇವರು ಸಂಘದ ಬೈಲಾದಲ್ಲಿನ ನಿಬಂಧನೆ 8ರ ಉಪನಿಬಂಧನೆ (9)ರಡಿ ಪ್ರದತ್ತವಾದ ಅಧಿಕಾರದನ್ವಯ ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸಿರುತ್ತಾರೆ:-

### ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:**

(i) ಈ ನಿಯಮಾವಳಿಗಳನ್ನು ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), (ವೃಂದ ಮತ್ತು ನೇಮಕಾತಿ) ನಿಯಮಾವಳಿ, 2019 ಎಂದು ಕರೆಯತಕ್ಕದ್ದು.

(ii) ಈ ನಿಯಮಾವಳಿಗಳು ರಾಜ್ಯ ಒಕ್ಕಲಿಗರ ಸಂಘದ ಕೇಂದ್ರ ಕಛೇರಿ ನೋಟೀಸ್ ಬೋರ್ಡಿನಲ್ಲಿ ಹಾಗೂ ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಬೆಂಗಳೂರು ಸಂಸ್ಥೆಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

2. **ಅನ್ವಯಿಕೆ:**

(1) ಈ ನಿಯಮಾವಳಿಗಳು ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಬೆಂಗಳೂರು ಸಂಸ್ಥೆಯ ಸೇವೆಗೆ ನಿಯಮಾನುಸಾರ ನೇಮಕಗೊಂಡು ವೇತನಾನುದಾನ ಪಡೆಯುತ್ತಿರುವ ಖಾಯಂ ನೌಕರರಿಗೆ ಮಾತ್ರ ಅನ್ವಯವಾಗುವುದು.

(2) ಈ ನಿಯಮಾವಳಿಗಳು ತಾತ್ಕಾಲಿಕವಾಗಿ ನೇಮಕಗೊಂಡ ನೌಕರರಿಗೆ ಅನ್ವಯಿಸುವುದಿಲ್ಲ.

3. **ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ:**

(i) ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಯ ವಿವಿಧ ಹುದ್ದೆಗಳು ಅನುಬಂಧಿಸಿದ ಷೆಡ್ಯೂಲ್-I ರ ಅಂಕಣ-2 ರಲ್ಲಿ ನಿಗದಿಪಡಿಸಿದಂತೆ ಇರತಕ್ಕದ್ದು. ಹುದ್ದೆಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯು ಅನುಕ್ರಮವಾಗಿ ಅಂಕಣ-3, 4 ಮತ್ತು 5 ರಲ್ಲಿರುವಂತೆ ಇರತಕ್ಕದ್ದು.

(ii) ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಸಿಬ್ಬಂದಿಯ ನೇಮಕಾತಿಗೆ ಕನಿಷ್ಠ ವಿದ್ಯಾರ್ಹತೆ ಮತ್ತು ವಯೋಮಿತಿ ಹಾಗೂ ನಿವೃತ್ತಿ ವಯಸ್ಸು ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಸಂಬಂಧಪಟ್ಟ ವರ್ಗದ ಸಿಬ್ಬಂದಿಗೆ ಅನುಗುಣವಾಗಿ ನಿಗದಿಪಡಿಸಿರುವಂತೆ ಅನ್ವಯವಾಗತಕ್ಕದ್ದು.

(iii) ಷೆಡ್ಯೂಲ್-I ರಲ್ಲಿ ಸೇರ್ಪಡೆಗೊಳ್ಳದಿರುವ ಹಾಗೂ ಸಂಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಹುದ್ದೆಗಳಲ್ಲಿ ಖಾಯಂ ಆಧಾರದ ಮೇಲೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಈಗಿನ ಪದನಾಮ ಮತ್ತು ಸೇವಾ ಷರತ್ತುಗಳೊಂದಿಗೆ ಅವರ ಪದಾವಧಿಯವರೆಗೆ ಮುಂದುವರೆಯತಕ್ಕದ್ದು. ತದನಂತರ ಅಂತಹ ಹುದ್ದೆಗಳು ರದ್ದುಗೊಳ್ಳುವುವು ಮತ್ತು ಷೆಡ್ಯೂಲ್-I ರಲ್ಲಿ ನಮೂದಿಸಿರುವ ಹುದ್ದೆಗಳು ಮಾತ್ರ ಸಂಸ್ಥೆಯಲ್ಲಿ ಮುಂದುವರೆಯತಕ್ಕದ್ದು.

4. **ಪರಿಭಾಷೆ:**

ಈ ನಿಯಮಾವಳಿಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು;

1) ''ಕಾಯಿದೆ'' ಎಂದರೆ ಕರ್ನಾಟಕ ಶಿಕ್ಷಣ ಕಾಯಿದೆ 1983 (ಕರ್ನಾಟಕ ಆಕ್ಟ್ 1 ಆಫ್ 1995).
2) ''ಸಂಘ'' ಎಂದರೆ ರಾಜ್ಯ ಒಕ್ಕಲಿಗರ ಸಂಘ.
3) 'ಪದಾಧಿಕಾರಿಗಳು' ಎಂದರೆ ಸಂಘದ ಬೈಲಾದ ನಿಬಂಧನೆ 7(1) (ಅ)ರ ಪ್ರಕಾರ ವ್ಯಾಖ್ಯಾನಿಸಿದ ಅಧ್ಯಕ್ಷರು ಹಾಗೂ ಇತರೆ ಪದಾಧಿಕಾರಿಗಳು ಒಳಗೊಂಡಂತೆ ಆಗಿರುತ್ತಾರೆ.
4) ಕಾರ್ಯಕಾರಿ ಸಮಿತಿ' ಎಂದರೆ ಸಂಘದ ಬೈಲಾ ಪ್ರಕಾರ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಗೆ ಸದಸ್ಯರಿಂದ ಚುನಾಯಿತಗೊಂಡ ವ್ಯಕ್ತಿಗಳು ಆಗಿರುತ್ತಾರೆ.
5) ''ಮ್ಯಾನೇಜ್‌ಮೆಂಟ್'' ಎಂದರೆ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿ ಆಗಿರುತ್ತದೆ.
6) ''ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜು''ಎಂದರೆ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದ್ದು ಭಾಗಶ: ಅಥವಾ ಪೂರ್ಣವಾಗಿ ಅನುದಾನ ಪಡೆಯುತ್ತಿರುವ ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಶ್ರೀಗಂಧದ ಕಾವಲು, ಬೆಂಗಳೂರು ಸಂಸ್ಥೆ ಆಗಿರುತ್ತದೆ.
7) ''ಆಡಳಿತಾಧಿಕಾರಿ'' ಎಂದರೆ ರಾಜ್ಯ ಸರ್ಕಾರವು ರಾಜ್ಯ ಒಕ್ಕಲಿಗರ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರನ್ವಯ ನೇಮಿಸಿದ ಅಧಿಕಾರಿ ಆಗಿರುತ್ತಾರೆ.
8) 'ಸಿ.ಇ.ಓ.' ಎಂದರೆ ರಾಜ್ಯ ಒಕ್ಕಲಿಗರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿರುತ್ತಾರೆ.
9) ''ವರ್ಷ'' ಎಂದರೆ ಸಂದರ್ಭವು ಅಗತ್ಯಪಡಿಸಿದಂತೆ ಶೈಕ್ಷಣಿಕ ವರ್ಷ ಅಥವಾ ಆರ್ಥಿಕ ವರ್ಷ ಆಗಿರುತ್ತದೆ.
10) ''ಬೋಧಕ ಮತ್ತು ಬೋಧಕೇತರ ವೃಂದಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರ'' ಎಂದರೆ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿ ಆಗಿರುತ್ತದೆ.
11) ''ಖಾಯಂ ಸಿಬ್ಬಂದಿ'' ಎಂದರೆ ಮಂಜೂರಾದ/ ಅಸ್ತಿತ್ವದಲ್ಲಿರುವ (substantive) ಬೋಧಕ ಅಥವಾ ಇತರೆ ಹುದ್ದೆಗೆ ನೇಮಕಾತಿ ನಿಯಮಗಳನ್ವಯ ಕ್ರಮಬದ್ಧವಾಗಿ ನೇಮಕಗೊಂಡಿರುವ ಹಾಗೂ ನೇಮಕಾತಿಯು ವೇತನಾನುದಾನ ಪಡೆಯುವ ಹುದ್ದೆಗಳೆಂದು ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಂದ ಕಾಲಕಾಲಕ್ಕೆ ಅನುಮೋದಿಸಲ್ಪಟ್ಟಿರುವ ಖಾಯಂ ಸಿಬ್ಬಂದಿ ಆಗಿರುತ್ತಾರೆ.

12) ''ತಾತ್ಕಾಲಿಕ ಸಿಬ್ಬಂದಿ'' ಎಂದರೆ ಮಂಜೂರಾದ ಹುದ್ದೆಗೆ ನೇಮಕಾತಿ ನಿಯಮಗಳನ್ವಯ ನೇಮಕಗೊಳ್ಳದೇ ತುರ್ತು ಅವಶ್ಯಕತೆಗನುಗುಣವಾಗಿ ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಬೆಂಗಳೂರು ಸಂಸ್ಥೆಗೆ ತಾತ್ಕಾಲಿಕವಾಗಿ ನೇಮಕಗೊಂಡ ಸಿಬ್ಬಂದಿಯಾಗಿರುತ್ತಾರೆ.

13) ''ಬ್ಯಾಂಕ್'' ಎಂದರೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ/ರಾಜ್ಯ ಒಕ್ಕಲಿಗರ ಸಂಘ ಇವರು ನಿಗದಿಪಡಿಸಿರುವ ಯಾವುದೇ ವಾಣಿಜ್ಯ/ ಸಹಕಾರಿ ಬ್ಯಾಂಕ್ ಆಗಿರುತ್ತದೆ.

14) ''ಇಲಾಖಾ ಮುಖ್ಯಸ್ಥರು'' ಎಂದರೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.

15) '' ನಿಯಂತ್ರಣ ಪ್ರಾಧಿಕಾರ''/ ''ಸಕ್ಷಮ ಪ್ರಾಧಿಕಾರ'' ಎಂದರೆ ನಿರ್ದೇಶಕರು, ಪದವಿ ಪೂರ್ವ ಶೀಕ್ಷಣ ಇಲಾಖೆ.

16) ''ಸಂಸ್ಥೆಯಲ್ಲಿನ ಹುದ್ದೆಗಳು'' ಎಂದರೆ ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಬೆಂಗಳೂರು ಸಂಸ್ಥೆಗೆ ಈ ನಿಯಮಾವಳಿಯ ಷೆಡ್ಯೂಲ್-I ರಲ್ಲಿ ನಿರ್ಧಿಷ್ಠಪಡಿಸಿದ ಹುದ್ದೆಗಳು.

17) ''ಆಯ್ಕೆ ಮಂಡಳಿ'' (Board of Selection) ಎಂದರೆ ಈ ನಿಯಮಾವಳಿಗಳಲ್ಲಿ ವಿವಿಧ ವರ್ಗದ ಹುದ್ದೆಗಳಿಗೆ ನಿಗದಿಪಡಿಸಿದ ಆಯ್ಕೆ ಮಂಡಳಿಗಳು.

18) 'ರಾಜ್ಯ' ಎಂದರೆ ಕರ್ನಾಟಕ ರಾಜ್ಯ.

ಈ ನಿಯಮಾವಳಿಗಳಲ್ಲಿ ನಿರ್ಧಿಷ್ಠವಾಗಿ ವ್ಯಾಖ್ಯಾನಿಸದಿರುವ ಇತರೆ ಪರಿಭಾಷೆಗಳು ಕರ್ನಾಟಕ ಶಿಕ್ಷಣ ಕಾಯಿದೆ 1983, ಕರ್ನಾಟಕ ಪದವಿ ಪೂರ್ವ ಶಿಕ್ಷಣ(ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ) ನಿಯಮಗಳು 2006 ರಲ್ಲಿನ ಮಾರ್ಗಸೂಚಿಗಳಂತೆ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದಂತೆ ಇರತಕ್ಕದ್ದು ಹಾಗೂ ಅವುಗಳನ್ನು ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಶ್ರೀಗಂಧದ ಕಾವಲು, ಬೆಂಗಳೂರು ಸಂಸ್ಥೆಗೆ ಅನ್ವಯವಾಗುವಷ್ಟರ ಮಟ್ಟಿಗೆ ಅರ್ಥೈಸಿಕೊಳ್ಳುವುದು.

**5. <u>ಸಿಬ್ಬಂದಿ ನೇಮಕಾತಿ:</u>**

(i) ಖಾಯಂ ಅಥವಾ ತಾತ್ಕಾಲಿಕ ಹುದ್ದೆಗಳನ್ನು ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರ ಪ್ರಸ್ತಾವನೆ ಮೇರೆಗೆ ಹಾಗೂ ನೇಮಕಾತಿಯ ಅವಶ್ಯಕತೆಗನುಗುಣವಾಗಿ ಕಾರ್ಯಕಾರಿ ಸಮಿತಿಯು ಈ ನಿಯಮಾವಳಿಗಳನ್ವಯ ಮಾತ್ರ ಹಾಗೂ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮೋದನೆ ಪಡೆದು ನೇಮಿಸಿಕೊಳ್ಳತಕ್ಕದ್ದು.

(ii) ಮಂಜೂರಾದ/ಹೆಚ್ಚುವರಿಯಾಗಿ ಅಥವಾ ಹೊಸದಾಗಿ ಸೃಜಿಸಿದ ಹುದ್ದೆಗಳಿಗೆ ಇನ್ನು ಮುಂದೆ ಮಾಡಲಾಗುವ ಯಾವುದೇ ನೇಮಕಾತಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ವೇತನಾನುದಾನ (Grant-in-aid) ಪಡೆಯುವ ಹುದ್ದೆಗಳೆಂದು ಮಾತ್ರ ತುಂಬತಕ್ಕದ್ದು.

**6. <u>ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪ್ರವೇಶಾತಿ:</u>**

(i) ಕರ್ನಾಟಕ ಪದವಿ ಪೂರ್ವ ಶಿಕ್ಷಣ(ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ) ನಿಯಮಗಳು 2006 ರಲ್ಲಿ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಮ್ಯಾನೇಜ್‌ಮೆಂಟ್‌ಗಳಿಗೆ ಸಿಬ್ಬಂದಿ ನೇಮಕಾತಿಗೆ ಹಾಗೂ ಇತರೇ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ಇದಲ್ಲದೆ ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) ನಿಯಮಗಳು 2013 ರಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಿನ್ಸಿಪಾಲರು ಮತ್ತು ಉಪನ್ಯಾಸಕರಿಗೆ ಅನ್ವಯಿಸುವಂತೆ ಕನಿಷ್ಠ ವಿದ್ಯಾರ್ಹತೆ ಮತ್ತು ನೇಮಕಾತಿ ವಿಧಾನವನ್ನು ನಿಗದಿಪಡಿಸಲಾಗಿದೆ. ಈ ನಿಯಮಗಳು ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಶ್ರೀಗಂಧದ ಕಾವಲು, ಬೆಂಗಳೂರು ಸಂಸ್ಥೆಗೆ ಅನ್ವಯವಾಗುತ್ತದೆ.

(ii) ಈ ನಿಯಮಗಳನ್ವಯ ಪ್ರತಿ ಕೋರ್ಸಿನಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ವಿಭಾಗಗಳ ಸಂಖ್ಯೆ (Sections) ಆಧಾರದ ಮೇಲೆ ಸಿಬ್ಬಂದಿ ಸಂಖ್ಯೆಯನ್ನು ನಿಗದಿಪಡಿಸತಕ್ಕದ್ದು. ಪ್ರತಿ ವಿಭಾಗದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕನಿಷ್ಠ 40 ಮತ್ತು ಗರಿಷ್ಠ 80 ಇರತಕ್ಕದ್ದು. ಯಾವುದೇ ಅಂಗೀಕೃತ ವಿಷಯ ಸಂಯೋಜನೆಯ (combination) ಕೋರ್ಸಿನಲ್ಲಿ ಹಾಲಿಯಿರುವ ಒಂದು ವಿಭಾಗದಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯು 100ನ್ನು ಮೀರಿದ ಹೊರತು ಮತ್ತೊಂದು ಹೆಚ್ಚುವರಿ ವಿಭಾಗವನ್ನು ತೆರೆಯಲು ಅನುಮತಿಸತಕ್ಕದ್ದಲ್ಲ.

(iii) ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಬೆಂಗಳೂರು, ಸಂಸ್ಥೆಯಲ್ಲಿ ಕಲೆ ವಿಭಾಗದಲ್ಲಿ ಹೆಚ್.ಇ.ಎಸ್.ಪಿ. ವಿಷಯ ಸಂಯೋಜನೆಯುಳ್ಳ ಕೋರ್ಸು ಮತ್ತು ವಾಣಿಜ್ಯ ವಿಭಾಗದಲ್ಲಿ ಹೆಚ್.ಇ.ಬಿ.ಎ. & ಸಿ.ಇ.ಬಿ.ಎ ವಿಷಯ ಸಂಯೋಜನೆಯುಳ್ಳ ಕೋರ್ಸುಗಳನ್ನು ಹಾಗೂ ವಿಜ್ಞಾನ ವಿಭಾಗದಲ್ಲಿ ಪಿ.ಸಿ.ಎಂ.ಬಿ. ವಿಷಯ ಸಂಯೋಜನೆಯುಳ್ಳ ಕೋರ್ಸನ್ನು ನಡೆಸಲಾಗುತ್ತಿದೆ. ಈ ಸಂಸ್ಥೆಯ ಕಲೆ ವಿಭಾಗ ಮತ್ತು ವಾಣಿಜ್ಯ ವಿಭಾಗದ ಹೆಚ್.ಇ.ಬಿ.ಎ. ಸಂಯೋಜನೆಯ ಕೋರ್ಸುಗಳು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ವೇತನಾನುದಾನಕ್ಕೆ ಅನುಮೋದಿತವಾಗಿರುತ್ತದೆ. ಆದರೆ ವಾಣಿಜ್ಯ ವಿಭಾಗದ ಸಿ.ಇ.ಬಿ.ಎ. ಸಂಯೋಜನೆಯ ಕೋರ್ಸು ಹಾಗೂ ವಿಜ್ಞಾನ ವಿಭಾಗಗಳು ಅನುದಾನರಹಿತವಾಗಿವೆ. ಈ ಸಂಸ್ಥೆಯಲ್ಲಿನ ವಿವಿಧ ಕೋರ್ಸುಗಳಲ್ಲಿ ಇರುವ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಹಾಗೂ ವಿಭಾಗಗಳ ಸಂಖ್ಯೆಗೆ ಅನುಗುಣವಾಗಿ ಕಾರ್ಯಭಾರವನ್ನು ಪರಿಗಣಿಸಿ ಬೋಧಕ ಸಿಬ್ಬಂದಿಯನ್ನು ನಿಗದಿಪಡಿಸಲಾಗಿದೆ. ಇದೇ ರೀತಿ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿರುವ ಸಿಬ್ಬಂದಿ ಮಾದರಿಯನ್ನು ಅನುಸರಿಸಿ ಕಾಲೇಜಿನಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬೋಧಕೇತರ ಸಿಬ್ಬಂದಿಯನ್ನು ನಿಗದಿಪಡಿಸಲಾಗಿದೆ.

(iv) ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಬೆಂಗಳೂರು, ಸಂಸ್ಥೆಯಲ್ಲಿ ಅನುದಾನ ರಹಿತವಾಗಿರುವ ವಾಣಿಜ್ಯ ವಿಭಾಗದ ಸಿ.ಇ.ಬಿ.ಎ. ವಿಷಯ ಸಂಯೋಜನೆಯ ಕೋರ್ಸು ಮತ್ತು ವಿಜ್ಞಾನ ವಿಭಾಗದ ಪಿ.ಸಿ.ಎಂ.ಬಿ. ವಿಷಯ ಸಂಯೋಜನೆಯ ಕೋರ್ಸುಗಳನ್ನು ಸಹಾ ವೇತನಾನುದಾನಕ್ಕೆ ಒಳಪಡಿಸಲು ಆಡಳಿತ ಮಂಡಳಿಯು ಶೀಘ್ರವಾಗಿ ಕ್ರಮ ವಹಿಸುವುದು. ನಂತರ ಸಿಬ್ಬಂದಿ ಮಾದರಿಗೆ ಅನುಗುಣವಾಗಿ ಎಲ್ಲಾ ಹುದ್ದೆಗಳನ್ನು ವೇತನಾನುದಾನ ಪಡೆಯುವ ಹುದ್ದೆಗಳೆಂದು ಮಾತ್ರ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಭರ್ತಿ ಮಾಡತಕ್ಕದ್ದು.

(v) ಸಂಸ್ಥೆಯು ಇನ್ನು ಮುಂದೆ ಮಂಜೂರಾದ ವೃಂದಗಳಲ್ಲಿ ಯಾವುದೇ ಹೆಚ್ಚುವರಿ ಹುದ್ದೆಯನ್ನು ಸೃಜಿಸುವುದು ಮತ್ತು/ಅಥವಾ ಷೆಡ್ಯೂಲ್– I ರಲ್ಲಿ ಸೇರಿಲ್ಲದ ಯಾವುದೇ ಹೊಸ ಹುದ್ದೆಯನ್ನು ಸೃಜಿಸುವುದು ಕಡ್ಡಾಯವಾಗಿ ಸರ್ಕಾರವು ನಿಗದಿಪಡಿಸಿರುವ ಸಿಬ್ಬಂದಿ ಮಾದರಿಗೆ ಅನುಗುಣವಾಗಿ ಅಂದರೆ ಸಂಸ್ಥೆಯಲ್ಲಿನ ಯಾವುದೇ ಶೈಕ್ಷಣಿಕ ಕೋರ್ಸಿನಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಮತ್ತು ವಿಭಾಗಗಳ ಸಂಖ್ಯೆಗೆ ಅನುಗುಣವಾಗಿರತಕ್ಕದ್ದು. ತದನಂತರ ಈ ಹುದ್ದೆಗಳನ್ನು ಷೆಡ್ಯೂಲ್– I ರಲ್ಲಿ ಸೇರ್ಪಡೆಗೊಳಿಸತಕ್ಕದ್ದು. ಇದಕ್ಕೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮೋದನೆ ಪಡೆಯತಕ್ಕದ್ದು. ಇಂತಹ ಹುದ್ದೆಗಳನ್ನು ವೇತನಾನುದಾನ ಪಡೆಯುವ ಹುದ್ದೆಗಳೆಂದು ಮಾತ್ರ ತುಂಬತಕ್ಕದ್ದು.

**7. ಕಾರ್ಯಭಾರ:**

(ಅ) ಕರ್ನಾಟಕ ಪದವಿ ಪೂರ್ವ ಶಿಕ್ಷಣ(ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ) ನಿಯಮಗಳು 2006 ರನ್ವಯ ಪದವಿ ಪೂರ್ವ ಕಾಲೇಜಿನಲ್ಲಿ ಕಲೆ ಮತ್ತು ವಾಣಿಜ್ಯ ಸಂಯೋಜನೆಯ ವಿಷಯಗಳನ್ನು ವಾರದಲ್ಲಿ ಪ್ರತಿ ವಿಭಾಗಕ್ಕೆ ಕನಿಷ್ಠ 4 ಗಂಟೆಗಳಿಗೆ ಕಡಿಮೆಯಿಲ್ಲದಂತೆ ಹಾಗೂ ವಿಜ್ಞಾನ ಸಂಯೋಜನೆಯ ವಿಷಯಗಳನ್ನು ವಾರದಲ್ಲಿ ಪ್ರತಿ ವಿಭಾಗಕ್ಕೆ 5 ಗಂಟೆಗಳಿಗೆ ಕಡಿಮೆಯಿಲ್ಲದಂತೆ (2 ಗಂಟೆಗಳ ಪ್ರಯೋಗಾಲಯ ಒಳಗೊಂಡಂತೆ) ಬೋಧಿಸತಕ್ಕದ್ದು. ಪದವಿ ಪೂರ್ವ ಕಾಲೇಜುಗಳು ಒಂದು ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ 220 ದಿನಗಳು ಕಾರ್ಯನಿರ್ವಹಿಸತಕ್ಕದ್ದು.

(ಆ) ಬೋಧಕ ಸಿಬ್ಬಂದಿಗೆ ಬೋಧನಾ ಅವಧಿಯು ಈ ಕೆಳಕಂಡಂತೆ ಇರತಕ್ಕದ್ದು.

| ಬೋಧಕ ಸಿಬ್ಬಂದಿ | ಬೋಧನಾ ಅವಧಿ–ಗಂಟೆಗಳಲ್ಲಿ/ವಾರಕ್ಕೆ |
|---|---|
| ಪ್ರಾಂಶುಪಾಲರು | 6 |
| ಉಪನ್ಯಾಸಕರು | 20 |

**8. ನೇರ ನೇಮಕಾತಿ:**

(i) ನೇಮಕಾತಿ ಪ್ರಾಧಿಕಾರವು ಯಾವುದೇ ಖಾಲಿ ಹುದ್ದೆಗಳನ್ನು ತುಂಬುವ ಅವಶ್ಯಕತೆ ಕಂಡುಬಂದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಖಾಲಿ ಹುದ್ದೆಗಳ ವಿವರ, ಹುದ್ದೆಗಳ ಸಂಖ್ಯೆ, ಅರ್ಹತಾ ಷರತ್ತುಗಳು ಮತ್ತು ನೇಮಕಾತಿ ವಿಧಾನ ಇತ್ಯಾದಿಗಳನ್ನು ನಮೂದಿಸಿ ರಾಜ್ಯದ ಪ್ರಮುಖ ಕನ್ನಡ ಹಾಗೂ ಇಂಗ್ಲೀಷ್ ವೃತ್ತ ಪತ್ರಿಕೆಗಳಲ್ಲಿ ಹಾಗೂ ಸೂಕ್ತವೆನಿಸುವ ಇತರೆ ಮಾಧ್ಯಮದಲ್ಲಿ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಕ್ರಮಕೈಗೊಳ್ಳತಕ್ಕದ್ದು.

(ii) ಷೆಡ್ಯೂಲ್ –I ರಲ್ಲಿ ನಿಗದಿಪಡಿಸಿದ ಹುದ್ದೆಗಳ ಮಿತಿಯನ್ನು ಮೀರಿ ಯಾವುದೇ ನೇಮಕಾತಿಗಳನ್ನು ಮಾಡಿಕೊಳ್ಳುವಂತಿಲ್ಲ.

**9. ಆಯ್ಕೆ ಮಂಡಳಿ:**

ನೇಮಕಾತಿ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಈ ಕೆಳಕಂಡ ಆಯ್ಕೆ ಮಂಡಳಿಗಳನ್ನು ನಿಗದಿಪಡಿಸಲಾಗಿದೆ.

**(ಅ) ಬೋಧಕ ಸಿಬ್ಬಂದಿಗೆ:**

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಂದ ನಾಮನಿರ್ದೇಶಿಸಲ್ಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿಷಯ ಪರಿಣಿತರು. | ಸದಸ್ಯರು |
| (ಇ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಂದ ನಾಮನಿರ್ದೇಶಿಸಲ್ಪಟ್ಟ ರಾಜ್ಯದ ಯಾವುದೇ ಖಾಸಗಿ/ಅನುದಾನಿತ ಪದವಿ ಪೂರ್ವ ಕಾಲೇಜಿನ ವಿಷಯ ಪರಿಣಿತರು. | ಸದಸ್ಯರು |
| (ಈ) | ಸಮಾಜ ಕಲ್ಯಾಣ ಇಲಾಖೆ/ ಹಿಂದುಳಿದ ವರ್ಗಗಳ ಇಲಾಖೆಗಳ ಪ್ರತಿನಿಧಿಗಳು. | ಸದಸ್ಯರುಗಳು |
| (ಉ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಊ) | ಪ್ರಿನ್ಸಿಪಾಲ್, ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು(ಅನುದಾನಿತ), ಬೆಂಗಳೂರು. | ಸದಸ್ಯ–ಕಾರ್ಯದರ್ಶಿ |

**ಕೋರಂ:** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ ಕನಿಷ್ಠ 4 ಸದಸ್ಯರು ಹಾಜರಿರತಕ್ಕದ್ದು. ಅವರುಗಳಲ್ಲಿ ಒಬ್ಬರು (ಈ) ರಲ್ಲಿನ ಸದಸ್ಯರು ಹಾಗೂ ಮತ್ತೊಬ್ಬರು (ಆ) ಅಥವಾ (ಇ) ರಲ್ಲಿನ ಸದಸ್ಯರು ಆಗಿರತಕ್ಕದ್ದು.

**(ಆ) ಬೋಧಕೇತರ ಹಾಗೂ ಇತರೆ ಸಿಬ್ಬಂದಿಗೆ :**

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಂದ ನಾಮನಿರ್ದೇಶಿಸಲ್ಪಟ್ಟ ಉಪನಿರ್ದೇಶಕರು ಹಾಗೂ ಮೇಲಿನ ದರ್ಜೆಯ ಅಧಿಕಾರಿ. | ಸದಸ್ಯರು |
| (ಇ) | ಆಡಳಿತ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಕೇಂದ್ರ ಸರ್ಕಾರದ/ ರಾಜ್ಯ ಸರ್ಕಾರದ ಗ್ರೂಪ್–ಎ ವೃಂದದ ನಿವೃತ್ತ ಅಧಿಕಾರಿ | ಸದಸ್ಯರು |
| (ಈ) | ಸಹಕಾರ ಸಂಘಗಳ ನಿಬಂಧಕರಿಂದ ನಾಮನಿರ್ದೇಶಿಸಲ್ಪಟ್ಟ ಅಧಿಕಾರಿ | ಸದಸ್ಯರು |
| (ಉ) | ಸಮಾಜ ಕಲ್ಯಾಣ ಇಲಾಖೆ/ ಹಿಂದುಳಿದ ವರ್ಗಗಳ ಇಲಾಖೆಗಳ ಪ್ರತಿನಿಧಿಗಳು. | ಸದಸ್ಯರುಗಳು |
| (ಊ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಋ) | ಪ್ರಿನ್ಸಿಪಾಲ್, ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಬೆಂಗಳೂರು. | ಸದಸ್ಯರು |
| (ಎ) | ಆಡಳಿತಾಧಿಕಾರಿ (Administrative Officer), ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ. | ಸಂಚಾಲಕರು |

**ಕೋರಂ:** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ ಕನಿಷ್ಠ 5 ಸದಸ್ಯರು ಹಾಜರಿರತಕ್ಕದ್ದು. ಅವರುಗಳಲ್ಲಿ (ಈ) ಮತ್ತು (ಉ) ರಲ್ಲಿನ ಇಬ್ಬರು ಸದಸ್ಯರು ಆಗಿರತಕ್ಕದ್ದು ಹಾಗೂ ಮತ್ತೊಬ್ಬರು (ಆ) ಮತ್ತು ಅಥವಾ (ಇ) ರಲ್ಲಿನ ಸದಸ್ಯರು ಆಗಿರತಕ್ಕದ್ದು.

10. **ಅರ್ಹ ಅಭ್ಯರ್ಥಿಗಳ ಆಯ್ಕೆ:**

(i) ಆಯ್ಕೆ ಮಂಡಳಿಯು ನಿಗದಿಪಡಿಸಿದ ಆಯ್ಕೆ ವಿಧಾನವನ್ನು ಅಳವಡಿಸಿಕೊಂಡು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ತಯಾರಿಸಿ ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸುವುದು.

(ii) ಆಯ್ಕೆ ವಿಧಾನವು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಉತ್ತಮ ಅಭ್ಯರ್ಥಿ ಆಯ್ಕೆಗೊಳ್ಳುವಂತೆ ಇರತಕ್ಕದ್ದು ಮತ್ತು ಬೋಧನಾ ಸಿಬ್ಬಂದಿ ಆಯ್ಕೆಗೆ ಅಪೆಂಡಿಕ್ಸ್–ಎ ರಲ್ಲಿ ನಿಗದಿಪಡಿಸಿರುವ ಮಾನದಂಡಗಳು ಹಾಗೂ ಕಾರ್ಯವಿಧಾನವನ್ನು ಒಳಗೊಂಡಿರತಕ್ಕದ್ದು.

(iii) ಬೋಧಕೇತರ ಸಿಬ್ಬಂದಿ ಮತ್ತು ಇತರೇ ಎಲ್ಲಾ ಹುದ್ದೆಗಳ ಆಯ್ಕೆಗೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ/ರಾಜ್ಯ ಸರ್ಕಾರ ಸಂಬಂಧಪಟ್ಟ ನಿಯಮಗಳಲ್ಲಿ/ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿರುವ ಆಯ್ಕೆ ವಿಧಾನವನ್ನು ಅನುಸರಿಸತಕ್ಕದ್ದು.

11. **ಅಭ್ಯರ್ಥಿಗಳ ನೇಮಕಾತಿ:**

(i) ಆಯ್ಕೆ ಮಂಡಳಿಯು ಕಳುಹಿಸಿದ ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ನೇಮಕಾತಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಹಾಗೂ ಸಂಬಂಧಪಟ್ಟ ನಿಯಮಗಳಲ್ಲಿ ನಿಗದಿಪಡಿಸಿರುವಂತೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಅವಶ್ಯವಿರುವ ವೈದ್ಯಕೀಯ ತಪಾಸಣೆ ಮತ್ತು ಶೈಕ್ಷಣಿಕ ದಾಖಲೆಗಳ ಪರಿಶೀಲನೆ ನಂತರ ಕಾರ್ಯಕಾರಿ ಸಮಿತಿಯು ನೇಮಕಾತಿ ಮಾಡಿಕೊಳ್ಳತಕ್ಕದ್ದು.

(ii) ನೇಮಕಾತಿ ಆದೇಶ ಹೊರಡಿಸಿದ ನಂತರ ನೇಮಕಾತಿಗೊಂಡ ಅಭ್ಯರ್ಥಿಯು ನಿಗದಿತ ಕಾಲಾವಧಿಯೊಳಗೆ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅವನ/ಅವಳ ನೇಮಕಾತಿಯು ರದ್ದುಗೊಳ್ಳುತ್ತದೆ. ಖಾಲಿಯಿರುವ ಹುದ್ದೆಗೆ ಮೆರಿಟ್‌ನಲ್ಲಿ ನಂತರದ ಸ್ಥಾನದಲ್ಲಿರುವ ಅಭ್ಯರ್ಥಿಯನ್ನು ನೇಮಿಸಿಕೊಳ್ಳತಕ್ಕದ್ದು. ಎರಡನೇ ಅಭ್ಯರ್ಥಿಯೂ ಸಹ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅಂತಹ ಹುದ್ದೆಯನ್ನು ಖಾಲಿ ಹುದ್ದೆ ಎಂದು ಪರಿಗಣಿಸಿ ಹೊಸದಾಗಿ ನೇಮಕಾತಿ ಪ್ರಕ್ರಿಯೆ ನಡೆಸತಕ್ಕದ್ದು.

12. **ಪರಿವೀಕ್ಷಣಾ ಅವಧಿ:**

(i) ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಯ ಸೇವೆಗೆ ನಿಯಮಾನುಸಾರ ನೇಮಕಗೊಂಡ ಎಲ್ಲಾ ಸಿಬ್ಬಂದಿಗೆ ಎರಡು ವರ್ಷಗಳ ಪರಿವೀಕ್ಷಣಾ ಅವಧಿ ಇರುತ್ತದೆ.

(ii) ನೇಮಕಾತಿ ಪ್ರಾಧಿಕಾರವು ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ ಪರಿವೀಕ್ಷಣಾ ಅವಧಿಯನ್ನು ಅವಶ್ಯಕವೆನಿಸಿದ ಅವಧಿಯವರೆಗೆ ವಿಸ್ತರಿಸಬಹುದು.

(iii) ನೇಮಕಾತಿ ಪ್ರಾಧಿಕಾರವು ಎರಡು ವರ್ಷಗಳ ಅಥವಾ ವಿಸ್ತರಿಸಿದ ಪರಿವೀಕ್ಷಣಾ ಅವಧಿಯು ಮುಕ್ತಾಯಗೊಂಡ ನಂತರ, ಪರೀಕ್ಷಾರ್ಥಿ ಅಭ್ಯರ್ಥಿಯ ಕಾರ್ಯನಿರ್ವಹಣೆ ಆಧರಿಸಿ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾರೆ ಎಂದು ಘೋಷಿಸತಕ್ಕದ್ದು.

(iv) ಅತೃಪ್ತಿಕರ ಕಾರ್ಯನಿರ್ವಹಣೆಗಾಗಿ ಅಥವಾ ಪರಿವೀಕ್ಷಣಾ ಅವಧಿಯಲ್ಲಿನ ಇತರೆ ಯಾವುದೇ ದುರ್ನಡತೆಗಾಗಿ ಯಾವ ಅಭ್ಯರ್ಥಿಯ ಪರಿವೀಕ್ಷಣಾ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆಂದು ಘೋಷಿಸಲ್ಪಡುವುದಿಲ್ಲವೋ ಅಂತಹವರನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಯಾವುದೇ ಪೂರ್ವಭಾವಿ ನೋಟೀಸ್ ನೀಡದೆ ಸೇವೆಯಿಂದ ವಜಾಗೊಳಿಸಬಹುದಾಗಿದೆ.

13. **ಮುಂಬಡ್ತಿ:**

(i) ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ ಮಂಜೂರಾದ ವೃಂದಬಲದಲ್ಲಿ ಬಡ್ತಿ ಕೋಟಾದಡಿ ಹುದ್ದೆ ಖಾಲಿ ಇದ್ದಾಗ ಮತ್ತು ಆ ಹುದ್ದೆಯನ್ನು ಭರ್ತಿ ಮಾಡುವುದು ಅವಶ್ಯಕವೆನಿಸಿದಾಗ ನೇಮಕಾತಿ ಪ್ರಾಧಿಕಾರವು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಅರ್ಹ ನೌಕರರಿಗೆ ಬಡ್ತಿ ನೀಡುವುದನ್ನು ಪರಿಗಣಿಸತಕ್ಕದ್ದು.

(ii) ಮುಂಬಡ್ತಿ ನೀಡಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ/ ರಾಜ್ಯ ಸರ್ಕಾರ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

14. **ಜೇಷ್ಠತೆ:**

(ಅ) ಸಂಸ್ಥೆಯ ಮ್ಯಾನೇಜ್‌ಮೆಂಟ್ ಪ್ರತಿಯೊಂದು ವೃಂದಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷವೂ ಜನವರಿ 1ನೇ ದಿನಾಂಕದಲ್ಲಿರುವಂತೆ ಜೇಷ್ಠತಾ ಪಟ್ಟಿ ತಯಾರಿಸಿ ಪ್ರಕಟಪಡಿಸತಕ್ಕದ್ದು.

(ಆ) ಜೇಷ್ಠತಾ ಪಟ್ಟಿ ತಯಾರಿಸಲು ಕರ್ನಾಟಕ ಸರ್ಕಾರಿ ನೌಕರರು (ಜೇಷ್ಠತೆ) ನಿಯಮಗಳು 1957 ರಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

(ಇ) ರಾಜ್ಯ ಒಕ್ಕಲಿಗರ ಸಂಘವು ನಡೆಸುತ್ತಿರುವ 4 ಅನುದಾನಿತ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳಾದ (1) ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜು, (2) ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಪೂರ್ವ ಸಂಜೆ ಕಾಲೇಜು, (3) ವಿಶ್ವೇಶ್ವರಪುರ ವಿಜ್ಞಾನ ಪದವಿ ಪೂರ್ವ ಕಾಲೇಜು ಮತ್ತು (4) ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು ಇವುಗಳಲ್ಲಿನ ಪ್ರತಿಯೊಂದು ವೃಂದಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಳಿಯು ಸಂಯುಕ್ತ ಜೇಷ್ಠತಾ ಪಟ್ಟಿಯನ್ನು (Combined Seniority List) ತಯಾರಿಸಿ ನಿರ್ವಹಿಸತಕ್ಕದ್ದು.

**15. ಇತರೆ ನಿಯಮಗಳ ಅನ್ವಯಿಕೆ:**

ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 1958 ಮತ್ತು ಸಿಬ್ಬಂದಿ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ 1978 (ಕರ್ನಾಟಕ ಆಕ್ಟ್ 14 ಆಫ್ 1990) ರ ಮೇರೆಗೆ ರಚಿಸಿರುವ ಇತರೆ ಎಲ್ಲಾ ನಿಯಮಗಳು ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಯಲ್ಲಿ ವೇತನಾನುದಾನ ಪಡೆಯುವ ಸಿಬ್ಬಂದಿಗೆ ಮಾತ್ರ ಅನ್ವಯವಾಗುತ್ತದೆ.

**16. ವ್ಯಾಖ್ಯಾನ:**

ಈ ನಿಯಮಾವಳಿಗಳ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ತೊಂದರೆ/ಗೊಂದಲ ಕಂಡುಬಂದಲ್ಲಿ, ಕಾರ್ಯಕಾರಿ ಸಮಿತಿಯು ಅಂತಹ ಉಪಬಂಧಗಳನ್ನು ಸಕ್ಷಮ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ವ್ಯಾಖ್ಯಾನಿಸತಕ್ಕದ್ದು ಮತ್ತು ಈ ಬಗ್ಗೆ ಸಕ್ಷಮ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.

ಆಡಳಿತಾಧಿಕಾರಿಯವರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಸಿದ್ದಯ್ಯ)
**ಮುಖ್ಯ ಕಾರ್ಯನಿರ್ವಹಣಾಧಿಕಾರಿ,**
**ರಾಜ್ಯ ಒಕ್ಕಲಿಗರ ಸಂಘ.**

**ಇವರಿಗೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು.
3. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು.
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಪ್ಯಾಲೇಸ್ ರಸ್ತೆ, ಬೆಂಗಳೂರು.
5. ಆಡಳಿತಾಧಿಕಾರಿಗಳು, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ವಿ.ವಿ.ಪುರಂ, ಬೆಂಗಳೂರು.
6. ಪ್ರಿನ್ಸಿಪಾಲ್, ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು, ಶ್ರೀಗಂಧದಕಾವಲು, ಹೊರವರ್ತುಲ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು-560 091.
7. ನೋಟೀಸ್ ಬೋರ್ಡ್, ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ, ಕೆ.ಆರ್. ರಸ್ತೆ, ವಿ.ವಿ.ಪುರಂ, ಬೆಂಗಳೂರು.
8. ನೋಟೀಸ್ ಬೋರ್ಡ್, ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು, ಶ್ರೀಗಂಧದಕಾವಲು, ಹೊರವರ್ತುಲ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು-560 091.
9. ಕಛೇರಿ ಕಡತ/ಬಿಡಿ ಪ್ರತಿಗಳು.